**O.S. 2693/2023**
**P.W.1**

**ದಿನಾಂಕಃ 08.01.2025 ರಂದು ಸಾಕ್ಷಿಯನ್ನು ಕರೆಯಿಸಿ ನ್ಯಾಯಾಲಯದಲ್ಲಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ವಾದಿಪರ ವಕೀಲರಿಂದಃ**

**ನಾನು ಈ ದಿನ ನ್ಯಾಯಾಲಯದಲ್ಲಿ ನನ್ನ ಮುಖ್ಯ ವಿಚಾರಣೆ ಬಾಬ್ತು ಪ್ರತಿಜ್ಞಾ ಪತ್ರ ಸಲ್ಲಿಸಿದ್ದು ಸದರಿ ಪ್ರತಿಜ್ಞಾ ಪತ್ರದಲ್ಲಿ ನಮೂದಿಸಿದ ವಿಷಯಗಳೆಲ್ಲವೂ ನನ್ನ ನಂಬಿಕೆ ಮತ್ತು ಜ್ಞಾನಕ್ಕೆ ಸಂಬಂಧ ಪಟ್ಟ ಸತ್ಯದಿಂದ ಕೂಡಿರುತ್ತವೆ.**

ದಿಃ03.02.2006 ರಂದು ನೊಂದಾಯಿಸಿದ ಕ್ರಯಪತ್ರದ ದೃಢೀಕೃತ ನಕಲು ಹಾಜರುಪಡಿಸಿದ್ದು ,ಅದನ್ನು **ನಿ.ಪಿ. 1** ಎಂದು ಗುರುತಿಸಲಾಯಿತು.

ದಿಃ 21.10.2021 ರಂದು ಪ್ರತಿವಾದಿಗೆ ಕೊಟ್ಟ ನೋಟೀಸಿನ ಕಚೇರಿ ಪ್ರತಿ ಹಾಜರುಪಡಿಸಿದ್ದು ಅದನ್ನು **ನಿ.ಪಿ. 2** ಎಂದು ಗುರುತಿಸಲಾಯಿತು.

ದಿಃ11.06.2022 ರಂದು ಪ್ರತಿವಾದಿಗೆ ಕೊಟ್ಟ ನೋಟೀಸಿನ ಕಚೇರಿ ಪ್ರತಿ ಹಾಜರುಪಡಿಸಿದ್ದು ಅದನ್ನು **ನಿ.ಪಿ. 3** ಎಂದು ಗುರುತಿಸಲಾಯಿತು.

ನಿ.ಪಿ.3 ಕ್ಕೆ ಪ್ರತಿವಾದಿ ದಿಃ06.07.2023 ರಂದು ಕೊಟ್ಟ ಉತ್ತರ ಹಾಜರುಪಡಿಸಿದ್ದು ,ಅದನ್ನು **ನಿ.ಪಿ.4** ಎಂದು ಗುರುತಿಸಲಾಯಿತು.

ಕಾರಣ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

( **ಪಾಟೀಸವಾಲುಃ** ಪ್ರತಿವಾದಿ ಪರ ವಕೀಲರು ಸಮಯವನ್ನು ಕೋರಿದ್ದು, ಸಮಯ ನೀಡಿದೆ)

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು )**

**ಓ ಹೇ ಕೇ ಸರಿ ಇದೆ.**

**( ಭಟ್ ಮಂಜುನಾಥ್ ನಾರಾಯಣ್ )**
**43 ನೇ ಅ.ನ.ಸಿ. ನ್ಯಾಯಾಧೀಶರು,**
**ಬೆಂಗಳೂರು.**

This is a True Copy of the Court Records Online. Authenticated @ districts.ecourtsindia.com/cnr/KABC010107822023/truecopy/order-2.pdf

www.ecourtsindia.com

**O.S. 2693/2023**
**P.W.1**

**ದಿನಾಂಕಃ 23.06.2025 ರಂದು ಸಾಕ್ಷಿಯನ್ನು ಕರೆಯಿಸಿ ನ್ಯಾಯಾಲಯದಲ್ಲಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನನಗೆ ಈಗ 61 ವರ್ಷ ವಯಸ್ಸು. ನಾನು ಎಸ್.ಎಸ್.ಎಲ್.ಸಿ. ಪಾಸಾಗಿರುತ್ತೇನೆ. ನನಗೆ ಇಂಗ್ಲೀಷ್ ಓದಲು ಬರೆಯಲು ಬರುತ್ತದೆ. ಮುಖ್ಯ ವಿಚಾರಣೆಯ ಪ್ರತಿಜ್ಞಾ ಪತ್ರದಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನ ತಮ್ಮ. ಈ ಕೇಸನ್ನು ದಾವಾ ಆಸ್ತಿಯಲ್ಲಿ ಅರ್ಧ ಭಾಗ ಬರಬೇಕೆಂದು ಹಾಕಿರುತ್ತೇನೆ. ಒಬ್ಬ ಬೈರಯಲ್ಲಪ್ಪ ಇವರಿಂದ ಆಸ್ತಿಯನ್ನು ಖರೀದಿಸಿದ್ದೇನೆ. ಆತ ಮೂಲಕ ಮಾಲೀಕನಾಗಿರುತ್ತಾರೆ. ಒಬ್ಬ ಪದ್ಮರೇಖಾ ಇವರಿಂದ ಖರೀದಿಸಿರುತ್ತೇನೆ. ಬೈರಯಲ್ಲಪ್ಪ ಪದ್ಮರೇಖಾ ಇವರಿಗೆ ಜಿ.ಪಿ.ಎ. ಕೊಟ್ಟಿದ್ದರಾ ಎಂದರೆ ಸಾಕ್ಷಿ ಬೈರಯಲ್ಲಪ್ಪ ಇವರಿಂದ ಶೈಲಜಾ ಇವರು ಖರೀದಿಸಿದ್ದು, ಶೈಲಜಾ ಇವರಿಂದ ಜಯರತ್ನ ಎನ್ನುವವರಿಗೆ ಜಿ.ಪಿ.ಎ. ಆಯಿತು , ಜಯರತ್ನ ಎನ್ನುವವರು ಪದ್ಮರೇಖಾ ಅವರಿಗೆ ಜಿ.ಪಿ.ಎ. ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಜಿ.ಪಿ.ಎ. ಹಾಜರುಪಡಿಸಿದ್ದೀರಾ ಎಂದರೆ ನನ್ನ ಬಳಿ ಜಿ.ಪಿ.ಎ. ಇಲ್ಲ ಎಂದು ಹೇಳುತ್ತಾರೆ. ನಿ.ಪಿ.1 ರಂತೆ ಬೈರಯಲ್ಲಪ್ಪ ನಮಗೆ ಮಾರಾಟ ಮಾಡಿರುತ್ತಾರೆ. ದಾವಾ ಆಸ್ತಿಯನ್ನು ದಿಃ03.06.2006 ರಂದು ಖರೀದಿಸಿದ್ದೇನೆ. 2 ಲಕ್ಷ ಹಣ ಕೊಟ್ಟು ಖರೀದಿಸಿದ್ದೇನೆ. 2 ಲಕ್ಷವನ್ನು ನನ್ನ ತಮ್ಮ ಪ್ರತಿವಾದಿಯೇ ಕೊಟ್ಟಿರುತ್ತಾನೆ ಎಂದರೆ ಸಾಕ್ಷಿ ಇಬ್ಬರೂ ಸೇರಿ ಕೊಟ್ಟಿರುತ್ತೇವೆ , ಜಂಟಿಯಾಗಿ ಖರೀದಿಸಿರುತ್ತೇವೆ ಎಂದು ಹೇಳುತ್ತಾರೆ. ಕ್ರಯಪತ್ರದಲ್ಲಿ ನಾನು ಎಷ್ಟು ಹಣ ಕೊಟ್ಟಿದ್ದೇನೆ ಪ್ರತಿವಾದಿ ಎಷ್ಟು ಹಣ ಕೊಟ್ಟಿದ್ದಾನೆ ಎಂದು ನಮೂದು ಇಲ್ಲ. ನಾನು ಯಾವುದೇ ಹಣ ನೀಡೇ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯೇ ಸಂಪೂರ್ಣ ಕ್ರಯದ ಹಣ ಕೊಟ್ಟಿದ್ದಾನೆ ಎಂದರೆ ಸುಳ್ಳು. ನೊಂದಣಿ ಶುಲ್ಕವನ್ನು ಸಹ ಪ್ರತಿವಾದಿಯೇ ಕೊಟ್ಟಿದ್ದಾನೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲೇ ಎಲ್ಲಾ ಇದೆ ಎಂದು ಹೇಳುತ್ತಾರೆ. stamp duty and registration charge ನನ್ನ ಹೆಸರಿನಲ್ಲೇ ಕಟ್ಟಲಾಗಿದೆ. ನಾನು ಹಿರಿಯವನಾಗಿದ್ದರಿಂದ ಪ್ರತಿವಾದಿ ನನ್ನ ಹೆಸರನ್ನು ಸೇರಿಸಿ ದಾವಾ ಆಸ್ತಿಯನ್ನು ಖರೀದಿಸಿದ್ದಾನೆ ಎಂದರೆ ಸುಳ್ಳು. ಪ್ರತಿವಾದಿಯೇ ಸಂಪೂರ್ಣ ಕ್ರಯದ ಹಣ, ನೊಂದಣಿ ಶುಲ್ಕಗಳನ್ನು ಭರಿಸಿ ಆಸ್ತಿ ಖರೀದಿಸಿದ್ದರಿಂದ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ

This is a True Copy of the Court Records Online. Authenticated @ districts.ecourtsindia.com/cnr/KABC010107822023/truecopy/order-2.pdf

www.ecourtsindia.com

ಸರಿಯಲ್ಲ. ನನಗೆ ದಾವಾ ಆಸ್ತಿಯಲ್ಲಿ ಅರ್ಧಭಾಗದ ಹಕ್ಕು ಇಲ್ಲ ಎಂದರೆ ಸರಿಯಲ್ಲ. 2006 ರಿಂದ ನನ್ನ ಸಹೋದರ ದಾವಾ ಆಸ್ತಿಯಲ್ಲಿ ವಾಸವಾಗಿದ್ದಾನೆ ಎಂದರೆ ಸರಿಯಲ್ಲ. ನಾನು ಬಾಡಿಗೆಗೆ ಆಸ್ತಿಯನ್ನು ನೀಡಿದ್ದು, ಆತನ ಬಾಡಿಗೆ ಮಾತ್ರ ತೆಗೆದುಕೊಳ್ಳುತ್ತಿದ್ದಾನೆ ಎಂದು ಹೇಳುತ್ತಾರೆ. ನನ್ನ ಸಹೋದರನೇ ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದಾನೆ ಎಂದರೆ ಸರಿಯಲ್ಲ. ನಾನು ಯಾರಿಗೂ ಬಾಡಿಗೆಗೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಸ್ವಾಧೀನದಲ್ಲಿ ಇಲ್ಲ ಮತ್ತು ನನಗೆ ಯಾವುದೇ ಭಾಗ ಬರಬೇಕಾದದ್ದು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯೇ ದಾವಾ ಆಸ್ತಿಯ ಸಂಪೂರ್ಣ ಮಾಲೀಕ ಎಂದರೆ ಸುಳ್ಳು. ಆಸ್ತಿಯ ಬೆಲೆ ಹೆಚ್ಚಾಗಿದ್ದರಿಂದ ಆಸ್ತಿಯನ್ನು ಕಬಳಿಸಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು )**

**ಓ ಹೇ ಕೇ ಸರಿ ಇದೆ.**

**( ಭಟ್ ಮಂಜುನಾಥ್ ನಾರಾಯಣ್ )**
**43 ನೇ ಅ.ನ.ಸಿ. ನ್ಯಾಯಾಧೀಶರು,**
**ಬೆಂಗಳೂರು.**

This is a True Copy of the Court Records Online. Authenticated @ districts.ecourtsindia.com/cnr/KABC010107822023/truecopy/order-2.pdf